**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 231/2022

**ಸಾಕ್ಷಿಯನ್ನು ದಿನಾಂಕ** 28.1.2026 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾಃ ರಾಧ | ಪಿ.ಡಬ್ಲ್ಯೂ-23 |
| ತಂದೆಯ/ಗಂಡನ ಹೆಸರು | : | ಶ್ರೀನಿವಾಸ | ಸಿ.ಡಬ್ಲ್ಯೂ-35 |
| ವಯಸ್ಸು | : | 50 | |
| ಉದ್ಯೋಗ | : | ಸಹಾಯಕ ನಿರ್ದೇಶಕರು, ಆರ್.ಎಫ್.ಎಸ್.ಎಲ್, ಮೈಸೂರು | |
| ವಾಸ ಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2011 ನವೆಂಬರ್ ನಿಂದ ಇಲ್ಲಿಯವರೆಗೆ ಆರ್.ಎಫ್.ಎಸ್.ಎಲ್, ಮೈಸೂರು ಇಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 16.10.2021 ರಂದು ನಮ್ಮ ಕಛೇರಿಗೆ ಹೆಬ್ಬಾಳ ಪೋಲಿಸ್ ಠಾಣೆಯ ಪೇದೆ 1292 ಇವರು ಕ್ರೈಂ ನಂಬರ್ 59/2021 ರ ಪ್ರಕರಣದ 8 ಸೀಲಾದ ವಸ್ತುಗಳನ್ನು ತಪಾಸಣೆಗೆ ನಮ್ಮ ಕಛೇರಿಯ ಸ್ವಾಗತ ವಿಭಾಗಕ್ಕೆ ನೀಡಿದ್ದರು.  ಆ ವಸ್ತುಗಳನ್ನು ಸ್ವಾಗತ ವಿಭಾಗದವರು ಸ್ವೀಕರಿಸಿ ಆರ್.ಎಫ್.ಎಸ್.ಎಲ್ ಬಿ.ಎಸ್ 909/2021 ರಂತೆ ಸಂಖ್ಯೆ ನೀಡಿ ಜೀವಶಾಸ್ತ್ರ ವಿಭಾಗಕ್ಕೆ ಕಳುಹಿಸಿರುತ್ತಾರೆ.  ಆ ಕಾಲಕ್ಕೆ ನಾನು ಸಹಾಯಕ

ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದೆ. ಆ ವಸ್ತುಗಳನ್ನು ಸ್ವತಃ ನಾನೇ ವಿಶ್ಲೇಷಿಸಲು ಪಡೆದಿರುತ್ತೇನೆ. ಆ ವಸ್ತುಗಳನ್ನು ಪರಿಶೀಲಿಸಿದಾಗ ಅವುಗಳ ಮೇಲಿದ್ದ ಸೀಲುಗಳು ಸುಸ್ಥಿತಿಯಲ್ಲಿದ್ದವು ಮತ್ತು ತನಿಖಾಧಿಕಾರಿ ಕಳುಹಿಸಿದ ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿದ್ದವು. ಆ ವಸ್ತುಗಳನ್ನು ತೆಗೆದು ನೋಡಿದಾಗ ಕ್ರಮಸಂಖ್ಯೆ 1 ರಲ್ಲಿ ಒಂದು ಬೆಡ್, ಕ್ರಮಸಂಖ್ಯೆ 2 ರಲ್ಲಿ ಒಂದು ಟವೆಲ್, ಕ್ರಮಸಂಖ್ಯೆ 3 ರಲ್ಲಿ ಒಂದು ಸೀರೆ ತುಂಡು, ಕ್ರಮಸಂಖ್ಯೆ 4 ರಲ್ಲಿ ಒಂದು ಮರದ ತುಂಡು, ಕ್ರಮಸಂಖ್ಯೆ 5 ರಲ್ಲಿ ಎರಡು ಸೀರೆ ತುಂಡುಗಳು, ಕ್ರಮಸಂಖ್ಯೆ 6 ರಲ್ಲಿ ಒಂದು ಬ್ಲೌಸ್, ಕ್ರಮಸಂಖ್ಯೆ 7 ರಲ್ಲಿ ಒಂದು ಲಂಗ ಹಾಗೂ ಕ್ರಮಸಂಖ್ಯೆ 8 ರಲ್ಲಿ ಒಂದು ಗಾಜ್ ಪೀಸ್ ಇತ್ತು. ಆ ವಸ್ತುಗಳನ್ನು ರಸಾಯನಿಕ ಮತ್ತು ಸೀರಾಲಜಿ ಪರೀಕ್ಷೆಗೆ ಒಳಪಡಿಸಿದಾಗ ಆ ಎಲ್ಲ ವಸ್ತುಗಳಲ್ಲಿ ರಕ್ತದ ಕಲೆ ಇತ್ತು ಮತ್ತು ಆ ರಕ್ತದ ಕಲೆ ಮನುಷ್ಯನ ಎ ಗುಂಪಿನ ರಕ್ತ ಕಲೆ ಇತ್ತು. ಈ ಬಗ್ಗೆ ನನ್ನ ಅಭಿಪ್ರಾಯ ವರದಿಯನ್ನು ಉಪ ನಿರ್ದೇಶಕರ ಮೂಲಕ ಪೋಲಿಸರಿಗೆ ಕಳುಹಿಸಿರುತ್ತೇನೆ. ಪರೀಕ್ಷೆ ಬಳಿಕ ಎಲ್ಲ ವಸ್ತುಗಳನ್ನು ಮರು ಪ್ಯಾಕ್ ಮಾಡಿ ನಮ್ಮ ಕಛೇರಿಯ ಮೊಹರಿನೊಂದಿಗೆ ಸಂಬಂಧಪಟ್ಟ ಪೋಲಿಸರಿಗೆ ನೀಡಿರುತ್ತೇನೆ. ಆ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂಓ 3 ರಿಂದ 6 ಎಂದು ಗುರುತಿಸಿರುವ ಎರಡು ಸೀರೆ ತುಂಡುಗಳು, ಬ್ಲೌಸ್, ಲಂಗ ಮತ್ತು ಕಟ್ಟಿಗೆ ತುಂಡು ನಾನು ತಪಾಸಣೆ ಮಾಡಿದ ಕೆಲವು ವಸ್ತುಗಳು ಇರುತ್ತವೆ. ಈಗ ನಾನು ನೋಡುತ್ತಿರುವ ಬೆಡ್, ಟವೆಲ್, ಸೀರೆ ತುಂಡು ಹಾಗೂ ಗಾಜ್ ಪೀಸ್ ಆ ದಿನ ನಾನು ತಪಾಸಣೆ ಮಾಡಿದ ಇನ್ನುಳಿದ ವಸ್ತುಗಳಿವೆ. ಸದರಿ ವಸ್ತುಗಳನ್ನು ಎಂಓ 7 ರಿಂದ 10 ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ವರದಿ ಮತ್ತು ಸ್ಯಾಂಪಲ್ ಸೀಲ್ ನಾನು ನೀಡಿದ್ದ ವರದಿ ಮತ್ತು ಸ್ಯಾಂಪಲ್ ಸೀಲ್ ಇರುತ್ತದೆ ಮತ್ತು ಅವುಗಳ ಮೇಲೆ ನನ್ನ ಸಹಿ ಇದೆ. ಸದರಿ ವರದಿ ಮತ್ತು ಸ್ಯಾಂಪಲ್ ಸೀಲ್ ನ್ನು ನಿಪಿ32 ಮತ್ತು ನಿಪಿ33 ಎಂದು, ಸಹಿಗಳನ್ನು ನಿಪಿ32 ಎ ಮತ್ತು ನಿಪಿ33 ಎ ಎಂದು ಗುರುತಿಸಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ**

ಸಾವು ಸಂಭವಿಸಿದ ಎಷ್ಟು ಗಂಟೆಗಳ ಬಳಿಕ ಪೋಲಿಸರು ಆ ವಸ್ತುಗಳನ್ನು ಸಂಗ್ರಹಿಸಿದ್ದರು ಎಂದು ನನಗೆ ಗೊತ್ತಿಲ್ಲ ಮತ್ತು ಆ ಬಗ್ಗೆ ನನ್ನ ವರದಿಯಲ್ಲಿ ನಮೂದಿಲ್ಲ. ನಾನು ಆ ವಸ್ತುಗಳ ಪ್ರಾಥಮಿಕ ತಪಾಸಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ತಪಾಸಣೆ ಮಾಡಿದ ಯಾವುದೇ ವಸ್ತುಗಳಲ್ಲಿ ರಕ್ತದ ಕಲೆಗಳಿರಲಿಲ್ಲ ಎಂದರೆ ಸರಿಯಲ್ಲ. ಆ ವಸ್ತುಗಳ ಮೇಲೆ ರಕ್ತದ ಕಲೆ ಯಾವ ಸಮಯದಲ್ಲಿ ಆಗಿತ್ತು ಎಂದು ನಾನು ಹೇಳಲಾಗುವುದಿಲ್ಲ. ಪೋಲಿಸರು ವಿನಂತಿ ಮೇರೆಗೆ ನಾನು ಯಾವುದೇ ವಸ್ತುಗಳನ್ನು ತಪಾಸಣೆ ಮಾಡದಿದ್ದರೂ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು